39 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿ.ಸಿ. ನಂ. 20364-2020

ಸಿಡಬ್ಲ್ಯೂ –1 ಪಿಡಬ್ಲ್ಯೂ– 1

ಸಾಕ್ಷಿದಾರರ ಹೆಸರು : ಶ್ರೀನಿವಾಸ

ತಂದೆಯ ಹೆಸರು : ವೆಂಕಟೇಶ

ವಯಸ್ಸು : 36 ವರ್ಷ

ಕೆಲಸ : ಖಾಸಗಿ ಉದ್ಯೋಗ

ವಾಸ : ಗೆದ್ದಲಹಳ್ಳಿ, ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ 07-02-2023 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ. ನಾನು 2020 ಜೂನ್ ತಿಂಗಳಲ್ಲಿ ರಾಮಯ್ಯ ಆಸ್ಪತ್ರೆಯ ಹತ್ತಿರ ಇರುವ ಸಿ ವಿ ಹೆಚ್ ಗೆಸ್ಟಹೌಸ್ ನಲ್ಲಿ ಹೌಸ್ ಕೀಪಿಂಗ್ ಸೂಪರವೈಸರ್ ಆಗಿ ಕೆಲಸ ಮಾಡುತ್ತಿದ್ದೆ. ದಿ. 14-06-2020 ರಂದು ರಾತ್ರಿ ಯಶವಂತಪುರದ ಒಂದು ಹೋಟೆಲ್ ನಲ್ಲಿ ಊಟ ಮುಗಿಸಿಕೊಂಡು ಗೆದ್ದಲಹಳ್ಳಿಯಲ್ಲಿರುವ ಮನೆಗೆ ನನಗೆ ಸಂಬಂಧಪಟ್ಟ ಯಮನಾ ಪ್ಲ್ಯಾಯಜೀನೋ ದ್ವಿಚಕ್ರ ವಾಹನ ಸಂಖ್ಯೆ ಕೆಎ 05 ಎಕ್ಸ 4007 ವಾಹನದಲ್ಲಿ ನ್ಯೂ ಬಿ ಇ ಎಲ್ ರಸ್ತೆಯ ರಾಮಯ್ಯ ಆಸ್ಪತ್ರೆಯ ಸಿಗ್ನಲ್ ನ ಮುಂದೆ ಇರುವ ಪೈಪ್ ಲೈನ್ ರಸ್ತೆಯಲ್ಲಿ ಹೋಗುತ್ತಿದ್ದಾಗ ರಾತ್ರಿ 11.30 ಗಂಟೆಗೆ 3 ಜನ ಅಪರಿಚಿತರು ಪಲ್ಸರ ವಾಹನದಲ್ಲಿ ಬಂದು ಯಶವಂತಪುರಕ್ಕೆ ಹೋಗುವ ದಾರಿಯ ಬಗ್ಗೆ ಕೇಳಿದ್ದು ನಾನು ದಾರಿಯನ್ನು ತೋರಿಸಿದಾಗ ಬೈಕಿನ ಹಿಂಭಾಗದಲ್ಲಿ ಕುಳಿತಿದ್ದ ವ್ಯಕ್ತಿಯು ನನ್ನ ಬೈಕಿನ ಕೀ ಹತ್ತಿರದಲ್ಲಿಟ್ಟಿದ್ದ ಮೊಬೈಲ್ ನ್ನು ಕಿತ್ತುಕೊಂಡಿರುತ್ತಾನೆ ಮತ್ತು ಬೈಕಿನ ಕೀಯಿಂದ ನನ್ನ ತಲೆಗೆ ಹೊಡೆದು ಮುಂದಕ್ಕೆ ಅರ್ಧ ಕಿ. ಮೀ ದೂರದಲ್ಲಿರುವ ಗಣೇಶ ದೇವಸ್ಥಾನದವರೆಗೆ ಹೋಗಿರುತ್ತಾರೆ. ನಂತರ ನಾನು ಆರೋಪಿತರುಗಳನ್ನು ಹಿಂಭಾಲಿಸಿಕೊಂಡು ಸದರಿ ದೇವಸ್ಥಾನದ ಹತ್ತಿರ ಹೋಗಿದ್ದು ಅಲ್ಲಿ ಆರೋಪಿತರುಗಳು ತಮ್ಮ ದ್ವಿಚಕ್ರ ವಾಹನವನ್ನು ನಿಲ್ಲಿಸಿ ನಾನು ಆರೋಪಿತರ ಬಳಿ ನನ್ನ ಮೊಬೈಲ್ ನ್ನು ಕೊಡು ಎಂದು ಕೇಳಿದಾಗ ಸದರಿ ದ್ವಿಚಕ್ರ ವಾಹನದ ಹಿಂಭಾಗದಲ್ಲಿ ಕುಳಿತಿದ್ದ ವ್ಯಕ್ತಿಯು ನನ್ನನ್ನು ತಳ್ಳಿ ಕೆಳಕ್ಕೆ ಬೀಳಿಸಿ, ವಾಹನದ ಕೀಯಿಂದ ನನ್ನ ತಲೆಗೆ ಚುಚ್ಚಿ

ಗಾಯಪಡಿಸಿರುತ್ತಾನೆ. ನಂತರ ಆರೋಪಿತರುಗಳು ನನಗೆ ಸಂಬಂಧಪಟ್ಟ ಸ್ಯಾಮಸಂಗ್ ಎ 9 ಮೊಬೈಲ್ ನ್ನು ತೆಗೆದುಕೊಂಡು ಹೋಗಿರುತ್ತಾರೆ.

ನಂತರ ಯಾರೋ ವಿದ್ಯಾರ್ಥಿಗಳು ನನ್ನನ್ನು ಎಂ ಎಸ್ ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಮರುದಿನ ಸದಾಶಿವನಗರ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ್ಥಳ ಪಂಚನಾಮೆ ಮತ್ತು ಮುದ್ದೆ ಮಾಲುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

39 ನೇ ಅ. ಮು. ಮ. ದಂ. ನ್ಯಾ